**ದಿನಾಂಕ:16.3.2013ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪಂ.ರಾಜ್ ಇಲಾಖೆ ಹಾಗೂ ಅಧ್ಯಕ್ಷರು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

ಹಾಜರಿದ್ದ ಅಧಿಕಾರಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪಂ.ರಾಜ್ ಇಲಾಖೆ
2. ನಿರ್ದೇಶಕರು (SWSM), ಗ್ರಾಅಪಂ.ರಾಜ್ ಇಲಾಖೆ
3. ಮುಖ್ಯ ಇಂಜಿನಿಯರ್, PRED, ಬೆಂಗಳೂರು
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ
5. ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ), ಗ್ರಾಅಪಂ.ರಾಜ್ ಇಲಾಖೆ

ಮುಖ್ಯ ಇಂಜಿನಿಯರ್, PREDರವರು ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕಿನ ನಾಗವಲ್ಲಿ ಮತ್ತು ಇತರೆ 30 ಗ್ರಾಮಗಳು, ಬೆಳ್ಳಿಗೇರಿ ಮತ್ತು ಇತರೆ 17 ಗ್ರಾಮಗಳ ಸಂಯುಕ್ತ ಕುಡಿಯುವ ನೀರಿನ ಯೋಜನೆಯನ್ನು ಕ್ರಮವಾಗಿ ರೂ.847ಲಕ್ಷ ಮತ್ತು ರೂ.608ಲಕ್ಷಗಳಲ್ಲಿ ಈಗಾಗಲೇ ದಿ:17.9.2012ರಲ್ಲಿ ಅನುಮೋದಿಸಿ, ಆಡಳಿತಾತ್ಮಕ ಅನುಮೋದನೆ ನೀಡಿರುವ ಕುರಿತಂತೆ ಪ್ರಾತ್ಯಕ್ಷತೆ ನೀಡಿರುತ್ತಾರೆ. ತತ್ಸಂಬಂಧ, 5 ವರ್ಷಗಳ O&M ಸೇರಿದಂತೆ ಯೋಜನೆಯನ್ನು ಸಂಯುಕ್ತಗೊಳಿಸಿ, ನಾಗವಲ್ಲಿ ಕೆರೆ ಜಲಮೂಲ ಆಧರಿಸಿ ಯೋಜನೆಯ ನಿರಂತರತೆ, ಕಾರ್ಯಸಿಂಧುತ್ವ ಮತ್ತು ಆರ್ಥಿಕ ಮಿತವ್ಯಯ ಆಧರಿಸಿ, ಸಂಯೋಜನೆ ಮಾಡುವುದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಕುರಿತಂತೆ, KTPP ಕಾಯ್ದೆಯನ್ವಯ ಆರ್ಥಿಕ ಮತ್ತು ತಾಂತ್ರಿಕ ಬಿಡ್‌ಗಳನ್ನು e-procurement ಮುಖೇನ ದಿ:18.1.2013ರಲ್ಲಿ ಆಹ್ವಾನಿಸಿದ್ದಾರೆ. ತತ್ಸಂಬಂಧ, ಶ್ರೀ.ಕೆ.ಭೂಪಾಲ್, ಹೈದ್ರಾಬಾದ್ ಏಕೈಕ ಗುತ್ತಿಗೆದಾರರು ಟೆಂಡರ್ ಪ್ರಕಟಣೆಯಲ್ಲಿ ಭಾಗವಹಿಸಿದ್ದು, ಅರ್ಹತೆಗಳಿಸಿರುತ್ತಾರೆ. ಆದರೆ, ಸದರಿ ಗುತ್ತಿಗೆದಾರರು ರೂ.17.864ಕೋಟಿಗಳನ್ನು ನಮೂದಿಸಿದ ಕಾರಣ, CSR ಮೊತ್ತ ರೂ.14.145ಕೋಟಿಗೆ ಹೋಲಿಸಿದಾಗ ಶೇಕಡ 25ರಷ್ಟು ಹೆಚ್ಚಳವಾಗಿರುತ್ತದೆ.

ಈ ಕುರಿತಂತೆ, ಬಿಡ್‌ದಾರರೊಂದಿಗೆ ಮಾತುಕತೆ ನಡೆಸಿ, ರೂ.16.267ಕೋಟಿಗಳಲ್ಲಿ ಅಂದರೆ, CSR ಮೊತ್ತದ ಮೇಲೆ ಶೇಕಡ 14.99ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಸದರಿ ಯೋಜನಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಒಪ್ಪಿಗೆ ಪತ್ರ ನೀಡಿರುತ್ತಾರೆಂದು ಸಭೆಗೆ ತಿಳಿಸಿದರು. ಈ ಎರಡು ಸಂಯುಕ್ತ ಯೋಜನೆಗಳಿಂದ ಒಟ್ಟು ರೂ.122ಲಕ್ಷ ಅನುಮೋದಿತ ಅಂದಾಜಿನ ಮೇಲೆ ಹೆಚ್ಚಳವಾಗಲಿದೆ.

ಅಂತೆಯೇ, ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕಿನ ಅರಿಯೂರು ಮತ್ತು 26 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಅರಿಯೂರು ಜಲಮೂಲ ಆಧರಿಸಿ, ದಿ:17.9.2012ರಲ್ಲಿ ರೂ.781ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕುರಿತಂತೆ, 5 ವರ್ಷಗಳ O&M ವೆಚ್ಚ ಸೇರಿದಂತೆ CE/PRED ನೀಡಿರುವ ತಾಂತ್ರಿಕ ಅನುಮೋದನೆ ಆಧರಿಸಿ, KTPP ಕಾಯ್ದೆಯನ್ವಯ ದಿ:15.1.2013ರಲ್ಲಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ಗೂ ಶ್ರೀ.ಕೆ.ಭೂಫಾಲ್, ಹೈದ್ರಾಬಾದ್ ಗುತ್ತಿಗೆದಾರರು ಭಾಗವಹಿಸಿದ್ದು, ಅರ್ಹತೆಗಳಿಸಿರುತ್ತಾರೆ. ಆದರೆ, ಸದರಿ ಯೋಜನೆಯ ಕಾಮಗಾರಿಗಳ ಅಂದಾಜನ್ನು CSR ಮೊತ್ತ ರೂ.7.394ಕೋಟಿಗಳಿಗೆ ಹೋಲಿಸಿದಾಗ, ಸ್ವೀಕೃತಿಯಾದ ಗುತ್ತಿಗೆ ಮೊತ್ತ

ರೂ.9.355ಕೋಟಿಯಾಗಿದ್ದು, ಶೇಕಡ 26.52ರಷ್ಟು ಹೆಚ್ಚಳವಾಗಿದೆ. ಈ ಬಗ್ಗೆ ಗುತ್ತಿಗೆದಾರರೊಂದಿಗೆ CE/PREDರವರು ದರ ಸಂಧಾನ ಮಾಡಲಾಗಿ, ಸದರಿಯವರು ರೂ.8.504ಕೋಟಿಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಇದರಿಂದ, ಟೆಂಡರ್ ಪ್ರೀಮಿಯಂ ಶೇಕಡ 14.99ರಷ್ಟು ಆಗಲಿದೆ. ಇದರಲ್ಲಿ, ಆಡಳಿತಾತ್ಮಕ ಮಂಜೂರಾತಿ ಮೇಲೆ ರೂ.69ಲಕ್ಷ ಹೆಚ್ಚಳವಾಗಲಿದೆ. ಸದರಿ ಯೋಜನೆಯು ಗ್ರಾಮೀಣ ಜನವಸತಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆಯಾಗಿದ್ದು, ಕಾಮಗಾರಿಯಲ್ಲಿನ ಸಾಮಗ್ರಿಗಳ ಬೆಲೆ ಹೆಚ್ಚಾಗಿರುವುದರಿಂದ ಹಾಗೂ ಟೆಂಡೆರ್‌ನ್ನು ತಿರಸ್ಕರಿಸಿದಲ್ಲಿ ಕಾಲವ್ಯಯವಾಗುವುದರ ಜೊತೆಗೆ ಕಾಮಗಾರಿ ಅನುಷ್ಠಾನ ವೆಚ್ಚ ಹೆಚ್ಚಳವಾಗುವುದರಿಂದ ಮರು ಟೆಂಡರ್‌ನಲ್ಲಿ ಕಡಿಮೆ- ದರ ನೀಡುವ ಸಾಧ್ಯತೆಯಿರುವುದಿಲ್ಲವೆಂದು ಶೇ.14.99ರಷ್ಟು ಹೆಚ್ಚಳವನ್ನು ಒಪ್ಪಬಹುದಾಗಿದೆಯೆಂದು ಟೆಂಡರ್ ಪರಿಶೀಲನಾ ಸಮಿತಿಯು ತನ್ನ ನಡವಳಿ ದಿನಾಂಕ:16.03.2003ರಲ್ಲಿ ಶಿಫಾರಸ್ಸು ಮಾಡಿರುತ್ತದೆ.

ಮೇಲ್ಕಂಡ 2 ಯೋಜನೆಗಳನ್ನು ಕಾಲಮಿತಿಯೊಳಗೆ ಲಭ್ಯವಿರುವ ಅನುದಾನ ಉಪಯೋಗಿಸಿಕೊಂಡು ಸಾರ್ವಜನಿಕ ಹಿತಾಸಕ್ತಿಯಿಂದ ಅನುಷ್ಠಾನಗೊಳಿಸಿದಲ್ಲಿ ಸಮಸ್ಯಾತ್ಮಕ ಗ್ರಾಮಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆಯಾಗಲಿದೆ ಹಾಗೂ ಈ ಯೋಜನೆ ಅನುಷ್ಠಾನದಲ್ಲಿ ಮುಂದೆ ಆಗಬಹುದಾದ ಹೆಚ್ಚಳವನ್ನು ತಪ್ಪಿಸಬಹುದೆಂದು ಸಭೆಗೆ ಮನವರಿಕೆಯಾಗಿದ್ದು, 2 ಟೆಂಡರ್‌ಗಳನ್ನು ಅಂಗೀಕರಿಸಿತು. ಇದಲ್ಲದೆ, ಈಗ ಒಪ್ಪಿಗೆಯಾಗಿರುವ ಟೆಂಡರ್ ಮೊತ್ತದ ಮೇಲೆ ಯಾವುದೇ ಹೆಚ್ಚಳವಾಗದಂತೆ ಎಲ್ಲಾ ಆಡಳಿತಾತ್ಮಕ ಮತ್ತು ತಾಂತ್ರಿಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು CE/PREDಗೆ ಸಭೆ ಸೂಚಿಸಿತು.

ಉಳಿದಂತೆ ಇತರೆ ಪ್ರಕರಣಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಿ, ಸಭೆ ಮುಕ್ತಾಯವಾಯಿತು.

ಸಹಿ/-
(ಡಾ: ಇ.ವಿ.ರಮಣ ರೆಡ್ಡಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಗ್ರಾಅಪ 15 ಗ್ರಾನೀಸ(5) 2013** **ದಿ:19.3.2013**

ಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
2. ನಿರ್ದೇಶಕರು (SWSM), ಹಾಗೂ KRWSSA, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಕಾವೇರಿ ಭವನ, ಬೆಂಗಳೂರು-09.
3. ಮುಖ್ಯ ಇಂಜನಿಯರ್,ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ,ನಂ.55, 4ನೇ ಮಹಡಿ, ಅಭಯ ಸಂಕೀರ್ಣ,ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.

ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಅಪಂ.ರಾಜ್ ಇಲಾಖೆ